ಕರ್ನಾಟಕ ಸರ್ಕಾರ
Government of Karnataka
ಮಹಾತ್ಮ ಗಾಂಧಿ ಗ್ರಾಮೀಣ ಇಂಧನ ಮತ್ತು ಅಭಿವೃದ್ಧಿ ಸಂಸ್ಥೆ
Mahatma Gandhi Institute of Rural Energy & Development
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಕರ್ನಾಟಕ ಸರ್ಕಾರ
ಶ್ರೀರಾಮಪುರ ಕ್ರಾಸ್, ಜಕ್ಕೂರು, ಬೆಂಗಳೂರು – 560 064
ದೂರವಾಣಿ /ಫ್ಯಾಕ್ಸ್ ಸಂಖ್ಯೆ : 080 23626359, 23626493 ಇ-ಮೇಲ್ : mgiredblr@gmail.com / mgiredblr@hotmail.com / edmgired@gmail.com ವೆಬ್‌ಸೈಟ್ : www.mgired.karnataka.gov.in
Rural Development & Panchayat Raj Department, Government of Karnataka
Srirampura Cross, Jakkur, Bengaluru - 560 064
Phone / Fax : 080 23626359, 23626493 e-Mail : mgiredblr@gmail.com / mgiredblr@hotmail.com / edmgired@gmail.com Website : www.mgired.karnataka.gov.in

ಸಂಖ್ಯೆ:ಎಂಜಿಐ/ವಿಇಹೆಚ್/ಎಸ್‌ಡಬ್ಲ್ಯುಎ೦/15/2015-16 ದಿನಾಂಕ 28.11.2023

## ಸಂಸ್ಥೆಯಲ್ಲಿರುವ ವಾಹನದ ಟೆಂಡರು ಸಹಿತ ಬಹಿರಂಗ ಹರಾಜು ಪ್ರಕಟಣೆ

ಸಾರ್ವಜನಿಕರಿಗೆ ಈ ಮೂಲಕ ತಿಳಿಸುವುದೇನೆಂದರೆ ಮಹಾತ್ಮ ಗಾಂಧಿ ಗ್ರಾಮೀಣ ಇಂಧನ ಮತ್ತು ಅಭಿವೃದ್ಧಿ ಸಂಸ್ಥೆಯಲ್ಲಿ ಸ್ವರಾಜ್ ಮಜ್ದಾ ಕೆ ಎ-50 - 2038 ವಾಹನವನ್ನು ಖರೀದಿಸಿ 15 ವರ್ಷಗಳು ಪೂರೈಸಿರುವುದರಿಂದ ವಾಹನದ ಫಿಟ್‌ನೆಸ್ ಸರ್ಟಿಫಿಕೇಟ್ ರದ್ದಾಗಿರುತ್ತದೆ. ಆದ್ದರಿಂದ, ಈ ವಾಹನವನ್ನು ಹರಾಜು ಹಾಕಲಾಗುತ್ತಿದೆ. ಈ ಕೆಳಗಿನ ವಾಹನವನ್ನು "ಎಲ್ಲಿದೆಯೋ ಮತ್ತು ಯಾವ ಸ್ಥಿತಿಯಲ್ಲಿದೆಯೋ ಹಾಗೆಯೆ" ದಿನಾಂಕ 13.12.2023 ರಂದು ಸಂಸ್ಥೆಯ ಆವರಣದಲ್ಲಿ ಕಾರ್ಯನಿರ್ವಾಹಕ ನಿರ್ದೇಶಕರು ಅಥವಾ ಅಧಿಕೃತ ಅಧಿಕಾರಿಗಳಿಂದ ಈ ಕೆಳಗಿನ ಷರತ್ತುಗಳಿಗೊಳಪಟ್ಟಂತೆ ಟೆಂಡರ್ ಮತ್ತು ಬಹಿರಂಗ ಹರಾಜು ಮೂಲಕ ವಿಲೇ ಮಾಡಲಾಗುವುದು. ಆಸಕ್ತಿ ಉಳ್ಳವರು ಭಾಗಹಿಸಬಹುದಾಗಿ ಪ್ರಕಟಿಸಲಾಗಿದೆ.

| | |
|---|---|
| ಟೆಂಡರ್ / ಹರಾಜು ನಡೆಯುವ ಸ್ಥಳ | ಮಹಾತ್ಮ ಗಾಂಧಿ ಗ್ರಾಮೀಣ ಇಂಧನ ಮತ್ತು ಅಭಿವೃದ್ಧಿ ಸಂಸ್ಥೆ, ಶ್ರೀರಾಮಪುರ ಕ್ರಾಸ್, ಜಕ್ಕೂರು, ಬೆಂಗಳೂರು-560064 |
| ಟೆಂಡರ್ ಸಲ್ಲಿಸುವ ದಿನ ಮತ್ತು ಸಮಯ | 29.11.2023 ರ ಬೆಳಗ್ಗೆ 10:00 ಗಂಟೆಯಿಂದ |
| ಟೆಂಡರ್ ಸಲ್ಲಿಕೆ ಮುಕ್ತಾಯ ದಿನ ಮತ್ತು ಸಮಯ | 13.12.2023 ರ ಸಂಜೆ 04:00 ಗಂಟೆವರೆಗೆ |
| ಬಹಿರಂಗ ಹರಾಜು ದಿನ ಮತ್ತು ಸಮಯ | 13.12.2023 ರ ಸಂಜೆ 04:15 ಗಂಟೆಗೆ |

## ಟೆಂಡರ್ ಮತ್ತು ಹರಾಜಿಗೆ ಪ್ರಸ್ತಾಪಿಸಿದ ವಾಹನಗಳ ವಿವರಗಳು

| ಕ್ರಮ ಸಂಖ್ಯೆ | ವಾಹನ ಸಂಖ್ಯೆ | ಬಣ್ಣ | ಮಾಡೆಲ್ | ವಾಹನ ಇರುವ ಸ್ಥಳ |
|---|---|---|---|---|
| 1 | ಸ್ವರಾಜ್ ಮಜ್ದಾ ಕೆ ಎ - 50 - 2038 | ಹಳದಿ | 2007 | ಮಹಾತ್ಮ ಗಾಂಧಿ ಗ್ರಾಮೀಣ ಇಂಧನ ಮತ್ತು ಅಭಿವೃದ್ಧಿ ಸಂಸ್ಥೆ, ಶ್ರೀರಾಮಪುರ ಕ್ರಾಸ್, ಜಕ್ಕೂರು, ಬೆಂಗಳೂರು-560064 |

## ಷರತ್ತುಗಳು

1. ಟೆಂಡರ್ / ಹರಾಜಿನಲ್ಲಿ ಭಾಗವಹಿಸುವ ಬಿಡ್ಡುದಾರರು ಅವರ ವಿಳಾಸವನ್ನು ಖಾತ್ರಿ ಪಡಿಸುವ ಸಲುವಾಗಿ ಚುನಾವಣಾಧಿಕಾರಿಗಳು ಒದಗಿಸುವ ಗುರುತಿನ ಚೀಟಿ ಅಥವಾ ವಿಳಾಸವನ್ನು ಖಾತ್ರಿಪಡಿಸುವ ದಾಖಲಾತಿ ಪ್ರತಿಗಳನ್ನು ಮುಂಗಡ ಠೇವಣಿ ಮೊತ್ತ ಸ್ವೀಕರಿಸುವ ಅಧಿಕಾರಿಯವರ ಸಮಕ್ಷಮದಲ್ಲಿ ಹಾಜರುಪಡಿಸುವುದು.
2. ಹರಾಜಿಗೆ ಪ್ರಸ್ತಾಪಿಸಿರುವ ವಾಹನವು "ಎಲ್ಲಿದೆಯೋ ಮತ್ತು ಯಾವ ಸ್ಥಿತಿಯಲ್ಲಿದೆಯೋ ಹಾಗೆಯೆ" ಹರಾಜು ಮಾಡಲಾಗುವುದು. ಸದರಿ ವಾಹನವನ್ನು ಖರೀದಿಸಲು ಆಸಕ್ತಿ ಹೊಂದಿರುವವರು ವಾಹನವನ್ನು ಸಂಸ್ಥೆಯ ಆವರಣದೊಳಗೆ ಮಾತ್ರ ಪರಿವೀಕ್ಷಿಸಬಹುದು.
3. ಹರಾಜು ನಡೆಸುವ ವಾಹನದ ಸ್ಥಿತಿಗತಿಗಳ ಬಗ್ಗೆ ಅವುಗಳಿರುವ ಸ್ಥಳದಲ್ಲಿ ಹರಾಜಿಗಿಂತ ಮೊದಲೆ ಸವಾಲುದಾರರು ಪರಿಶೀಲಿಸಿಕೊಳ್ಳತಕ್ಕದ್ದು. ಹರಾಜಿನ ನಂತರ ವಾಹನದ ಗುಣಮಟ್ಟ ಹಾಗೂ ಸ್ಥಿತಿಗತಿಯ ಬಗ್ಗೆ ಬರುವ ಯಾವುದೇ ಅಹವಾಲುಗಳನ್ನು ಪರಿಗಣಿಸಲಾಗುವುದಿಲ್ಲ.
4. ಟೆಂಡರ್ / ಬಹಿರಂಗ ಹರಾಜಿನಲ್ಲಿ ಭಾಗವಹಿಸುವ ಬಿಡ್ಡುದಾರರು ರೂ.20,000/-ಗಳನ್ನು ಮುಂಗಡ ಠೇವಣಿ ಮೊತ್ತವನ್ನಾಗಿ ಹರಾಜಿಗೆ ಮೊದಲು ಹರಾಜು ನಡೆಸುವ ಅಧಿಕಾರಿಯವರಲ್ಲಿ ಪಾವತಿಸಿ ಹರಾಜಿನಲ್ಲಿ ಭಾಗವಹಿಸುವುದ.
5. ಟೆಂಡರ್ ಮೂಲಕ ಬಿಡ್ಡು ನೀಡುವವರು ಟೆಂಡರ್‌ನ ಜೊತೆಗೆ Executive Director, MGIRED ಇವರ ಹೆಸರಿನಲ್ಲಿ ರಾಷ್ಟ್ರೀಕೃತ ಬ್ಯಾಂಕಿನಿಂದ ರೂ.20,000/-ಗಳ ಡಿ.ಡಿ. ಯನ್ನು ತೆಗೆದು ಟೆಂಡರ್ ಫಾರಂನೊಂದಿಗೆ ಲಗತ್ತಿಸತಕ್ಕದ್ದು (ನಗದು, ಆನ್‌ಲೈನ್ ಮೂಲಕ ಅಥವಾ ಚೆಕ್ ಅನ್ನು ನೀಡುವಂತಿಲ್ಲ).
6. ಟೆಂಡರಿನ ಮುಖಾಂತರ ಬಿಡ್ಡು ನೀಡುವ ಖರೀದಿದಾರರು ಟೆಂಡರ್ ಫಾರಂ ಅನ್ನು ದಿನಾಂಕ 13.12.2023 ರಂದು ಮಧ್ಯಾಹ್ನ 03:00 ಗಂಟೆಯೊಳಗೆ ಈ ಸಂಸ್ಥೆಯ ಕಛೇರಿಯಿಂದ ಅಥವಾ ಸಂಸ್ಥೆಯ ವೆಬ್‌ಸೈಟ್: https://www.migred.karnataka.gov.in ನಿಂದ ಪಡೆದು, ನಿಗಧಿತ ಮೌಲ್ಯ ರೂ.100/-ಗಳನ್ನು ಸಲ್ಲಿಸಿ ಸಂಸ್ಥೆಯಿಂದ ರಸೀದಿ ಪಡೆಯತಕ್ಕದ್ದು.
7. ಮೊಹರಾದ ಟೆಂಡರ್ ಅನ್ನು ದಿನಾಂಕ 13.12.2023 ರಂದು ಸಂಜೆ 04:00 ರ ತನಕ ಹರಾಜು ನಡೆಯುವ ಸ್ಥಳದಲ್ಲಿ ಇಟ್ಟಿರುವ ಟೆಂಡರ್ ಪೆಟ್ಟಿಗೆಯಲ್ಲಿ ಹಾಕುವುದು. ನಿಗಧಿತ ನಮೂನೆಯಲ್ಲಿ ಇಲ್ಲದಿರುವ ಹಾಗೂ ಷರತ್ತುಗಳಿಂದ ಕೂಡಿದ ದೋಷಪೂರಕ ಮತ್ತು ತಂತಿ ಮೂಲಕ ಕಳುಹಿಸುವ ಟೆಂಡರ್‌ಗಳನ್ನು ನಿರಾಕರಿಸಲಾಗುವುದು.
8. ಹರಾಜು ಮುಗಿದ ತಕ್ಷಣ ಹಾಜರಿರುವ ಬಿಡ್ಡುದಾರರ ಸಮಕ್ಷಮದಲ್ಲಿ ಟೆಂಡರ್ ಅನ್ನು ತೆರೆದು ಓದಲಾಗುವುದು ಹಾಗೂ ಬಹಿರಂಗ ಹರಾಜಿನಲ್ಲಿ ನೀಡಿದ ಬಿಡ್ಡು ಮೊತ್ತ ಅಥವಾ ಟೆಂಡರ್ ಮೂಲಕ ನೀಡಿದ ಬಿಡ್ಡು ಮೊತ್ತ ಇವರೆಡರಲ್ಲಿ ಯಾವುದು ಹೆಚ್ಚೋ ಅದನ್ನು ಖರೀದಿ ಮೊತ್ತವೆಂದು ಪರಿಗಣಿಸಿ ಸ್ಥಿರೀಕರಿಸಲು ಕ್ರಮ ಕೈಗೊಳ್ಳಲಾಗುವುದು.
9. ಹರಾಜು ನಡೆಸುವ ಅಧಿಕಾರಿಯು ಹರಾಜಿನ ದಿನಾಂಕ ಮತ್ತು ವೇಳೆಯನ್ನು ಮುಂದೂಡುವ ಅಥವಾ ರದ್ದು ಪಡಿಸುವ ಅಧಿಕಾರವನ್ನು ಹೊಂದಿರುತ್ತಾರೆ.

10. ಹರಾಜು / ಟೆಂಡರ್‌ನಲ್ಲಿ ವಾಹನವನ್ನು ಖರೀದಿಸುವ ಟೆಂಡರ್ ಅಥವಾ ಸವಾಲುದಾರರು ಅದೇ ದಿನ ಟೆಂಡರ್ / ಸವಾಲು ಮೊತ್ತದ ಶೇಕಡಾ 25 ರಷ್ಟು ಮೌಲ್ಯವನ್ನು ಹಾಗೂ ಚಾಲ್ತಿಯಲ್ಲಿರುವ ತೆರಿಗೆಗಳನ್ನು ಹರಾಜು ದಿನದಂದೇ ಪಾವತಿಸತಕ್ಕದ್ದು. ತಪ್ಪಿದ್ದಲ್ಲಿ ಸವಾಲುದಾರರು / ಟೆಂಡರ್ ದಾರರು ಪಾವತಿಸಿರುವ ಮುಂಗಡ ಠೇವಣಿ ಪಾವತಿಸಿರುವ ಮುಂಗಡ ಠೇವಣಿ ಮೊತ್ತದ ಹಣವನ್ನು ಸಂಸ್ಥೆಯು ಮುಟ್ಟುಗೋಲು ಹಾಕಿಕೊಂಡು ವಾಹನವನ್ನು ಅವರ ವೈಯಕ್ತಿಕ ಜವಾಬ್ದಾರಿಯ ಮೇಲೆ ಮರು ಹರಾಜು ಮಾಡಲಾಗುವುದು. ಇದರಿಂದ ಸಂಸ್ಥೆಗೆ ನಷ್ಟ ಸಂಭವಿಸಿದಲ್ಲಿ ಅದನ್ನು ಬಿಡ್ಡುದಾರರಿಂದ ಕಾನೂನು ಪ್ರಕಾರ ವಸೂಲು ಮಾಡಲಾಗುವುದು. ಇಂತಹ ಸಂದರ್ಭಗಳಲ್ಲಿ ಸಂಸ್ಥೆಗೆ ಆಗುವ ನಷ್ಟವೆಂದು ಪರಿಗಣಿಸಿ ವಸೂಲಾತಿಗೆ ಕ್ರಮ ಕೈಗೊಳ್ಳಲಾಗುವುದು. ಆದರೆ ಮರು ಹರಾಜಿನಿಂದ ಸಂಸ್ಥೆಗೆ ಹೆಚ್ಚಿನ ಮೊತ್ತ ಬಂದಲ್ಲಿ ಅದರ ಲಾಭಾಂಶವನ್ನು ಪಡೆಯಲು ಸವಾಲು/ಟೆಂಡರ್‌ದಾರರು ಅರ್ಹರಾಗುವುದಿಲ್ಲ.

11. ಹರಾಜಿನಲ್ಲಿ ವಾಹನವನ್ನು ಪಡೆದುಕೊಳ್ಳುವವರು ತಮ್ಮ ಸ್ವಂತ ಖರ್ಚು ಮತ್ತು ಜವಾಬ್ದಾರಿಯಲ್ಲಿ ವಾಹನಗಳ ಮಾಲೀಕತ್ವದ ಬದಲಾವಣೆಯನ್ನು ಮಾಡಿಕೊಳ್ಳತಕ್ಕದ್ದು (ಮಾಲೀಕತ್ವ ಬದಲಾವಣೆಗೆ ಅಗತ್ಯವಿರುವ ದಾಖಲಾತಿಗಳನ್ನು ಈ ಕಾರ್ಯಾಲಯದಿಂದ ಒದಗಿಸಲಾಗುವುದು).

12. ಹರಾಜಿಗೆ ಸಂಬಂಧಿಸಿದ ಸ್ಥಿರೀಕರಣ ಆದೇಶವು ಸ್ವೀಕೃತವಾದ ದಿನದಂದೆ ಅಥವಾ ದಿನಾಂಕ 18.12.2023 ರೊಳಗಾಗಿ ಖರೀದಿದಾರರು ಪಾವತಿಸಲು ಬಾಕಿ ಇರುವ ಶೇಕಡಾ 75 ರಷ್ಟು ಮೊತ್ತವನ್ನು (ಜಿಎಸ್‌ಟಿ / ಚಾಲ್ತಿಯಲ್ಲಿರುವ ತೆರಿಗೆಗಳು ಸೇರಿ) ಪಾವತಿಸಿ ವಾಹನವನ್ನು ತಮ್ಮ ವಶಕ್ಕೆ ತೆಗೆದುಕೊಳ್ಳತಕ್ಕದ್ದು. ಬಿಡ್ಡದಾರರು ವಾಹನವನ್ನು ನಿಗದಿಪಡಿಸಿದ ಅವಧಿಯಲ್ಲಿ ತೆಗೆದುಕೊಂಡು ಹೋಗದಿದ್ದ ಪಕ್ಷದಲ್ಲಿ ಕಳ್ಳತನ, ಬೆಂಕಿ ಹಾಗೂ ಇತರ ಯಾವುದೇ ನಷ್ಟಗಳಿಗೆ ಸಂಸ್ಥೆಯು ಜವಾಬ್ದಾರರಾಗುವುದಿಲ್ಲ.

13. ವಾಹನದ ಹರಾಜು / ಟೆಂಡರ್‌ನ್ನು ಸ್ವೀಕರಿಸುವ ಅಥವಾ ತಿರಸ್ಕರಿಸುವ ಅಧಿಕಾರವು ಕಾರ್ಯನಿರ್ವಾಹಕ ನಿರ್ದೇಶಕರು, ಎಂ.ಜಿ.ಐ.ಆರ್.ಡಿ., ಬೆಂಗಳೂರು ಇವರಿಗಿದ್ದು ಈ ಬಗ್ಗೆ ಸಂಸ್ಥೆಯ ತೀರ್ಮಾನವೇ ಅಂತಿಮವಾಗಿರುತ್ತದೆ.

14. ಯಾವುದೇ ಸಂಸ್ಥೆ ಅಥವಾ ವ್ಯಕ್ತಿಯ ಪರವಾಗಿ ಇನ್ನೊಬ್ಬ ವ್ಯಕ್ತಿಯು ಟೆಂಡರ್ ಅಥವಾ ಹರಾಜಿನಲ್ಲಿ ಭಾಗವಹಿಸಲು ಅವಕಾಶ ನೀಡಲಾಗುವುದಿಲ್ಲ ಮತ್ತು ಪರೋಕ್ಷವಾಗಿ ಸಂಸ್ಥೆ ಅಥವಾ ವ್ಯಕ್ತಿಯ ಪರವಾಗಿ ಸಹಿ ಪಡೆದು ಅಥವಾ ಅಧಿಕಾರ ಪಡೆದು ಹರಾಜು ಅಥವಾ ಟೆಂಡರ್‌ನಲ್ಲಿ ಭಾಗವಹಿಸಲು ಅವಕಾಶವಿರುವುದಿಲ್ಲ ಹಾಗೂ ಅಂತಹ ಯಾವುದೇ ಟೆಂಡರ್ ಸಲ್ಲಿಸಿದ್ದಲ್ಲಿ ಅವುಗಳನ್ನು ಅನರ್ಹಗೊಳಿಸಲಾಗುವುದು.

15. ಒಂದಕ್ಕಿಂತ ಹೆಚ್ಚು ವ್ಯಕ್ತಿಗಳು ಜೊತೆಯಾಗಿ ಸಹಿ ಮಾಡಿ ಹಾಕಿರುವ ಟೆಂಡರ್ ಅಥವಾ ಹರಾಜನ್ನು ಅಂತಹ ವ್ಯಕ್ತಿಗಳು ಒಂದು ನೋಂದಾಯಿತ ಸಂಸ್ಥೆ ಅಥವಾ ಕಂಪನಿಗೆ ಸಂಬಂಧಪಟ್ಟವರಾಗಿದ್ದು ಮತ್ತು ಸಾಮಾನ್ಯ ಅಧಿಕಾರ ಹೊಂದಿದ್ದರು ಮಾತ್ರ ಸಹಿ ಮಾಡಿದ್ದಲ್ಲಿ ಸ್ವೀಕರಿಸಲಾಗುವುದು. ಈ ಬಗ್ಗೆ ನೋಂದಾಯಿತ ಸಂಸ್ಥೆ ಅಥವಾ ಕಂಪನಿಯ ದಾಖಲಾತಿಗಳನ್ನು ಹಾಜರುಪಡಿಸುವುದು.

16. ಕಪ್ಪು ಪಟ್ಟಿಯಲ್ಲಿರುವ ವ್ಯಕ್ತಿಗಳ ಟೆಂಡರ್/ಹರಾಜನ್ನು ಅಂಗೀಕರಿಸಲಾಗುವುದಿಲ್ಲ. ಅಪ್ರಾಪ್ತ ವಯಸ್ಕರು ಟೆಂಡರ್/ಹರಾಜಿನಲ್ಲಿ ಭಾಗವಹಿಸಲು ಅವಕಾಶವಿರುವುದಿಲ್ಲ.

17. ಟೆಂಡರ್ ಅಥವಾ ಹರಾಜು ಸ್ವೀಕೃತಿಯಾಗದ ಇತರ ಸವಾಲುದಾರರ/ಟೆಂಡರ್‌ದಾರರ ಠೇವಣಿಯನ್ನು ಹರಾಜು/ಟೆಂಡರ್ ಮುಕ್ತಾಯವಾದ ಕೂಡಲೇ ಹಿಂದಿರುಗಿಸಲಾಗುವುದು.

18. ಹೆಚ್ಚಿನ ಮಾಹಿತಿಗಳು ಬೇಕಿದಲ್ಲಿ ಈ ಕಛೇರಿಯಲ್ಲಿ ಕಛೇರಿ ವೇಳೆ ಸಂಪರ್ಕಿಸಬಹುದಾಗಿದೆ.

**ಕಾರ್ಯನಿರ್ವಾಹಕ ನಿರ್ದೇಶಕರು**

ಮಹಾತ್ಮ ಗಾಂಧಿ ಗ್ರಾಮೀಣ ಇಂಧನ ಮತ್ತು ಅಭಿವೃದ್ಧಿ ಸಂಸ್ಥೆ,

ಬೆಂಗಳೂರು

ಇವರಿಗೆ,

ಎಲ್ಲಾ ಸಾರ್ವಜನಿಕರಿಗೆ ಹಾಗೂ ವಾಹನ ಖರೀದಿದಾರರುಗಳಿಗೆ

ಪ್ರತಿಯನ್ನು:

1. ಪ್ರಕಟಣಾ ಫಲಕಕ್ಕೆ - ಪ್ರಚಾರಕ್ಕಾಗಿ
2. ಸಹಾಯಕ ನಿರ್ದೇಶಕರು
3. ಆಡಳಿತ ಅಧೀಕ್ಷಕರು
4. ಲೆಕ್ಕ ಸಹಾಯಕರು

ಕರ್ನಾಟಕ ಸರ್ಕಾರ
Government of Karnataka

# ಮಹಾತ್ಮ ಗಾಂಧಿ ಗ್ರಾಮೀಣ ಇಂಧನ ಮತ್ತು ಅಭಿವೃದ್ಧಿ ಸಂಸ್ಥೆ

# Mahatma Gandhi Institute of Rural Energy & Development

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಕರ್ನಾಟಕ ಸರ್ಕಾರ
ಶ್ರೀರಾಮಪುರ ಕ್ರಾಸ್, ಜಕ್ಕೂರು, ಬೆಂಗಳೂರು – 560 064
ದೂರವಾಣಿ / ಫ್ಯಾಕ್ಸ್ ಸಂಖ್ಯೆ : 080 23626359, 23626493 ಇ ಮೇಲ್ : mgiredblr@gmail.com / mgiredblr@hotmail.com / edmgired@gmail.com ವೆಬ್‌ಸೈಟ್ : www.mgired.karnataka.gov.in

Rural Development & Panchayat Raj Department, Government of Karnataka
Srirampura Cross, Jakkur, Bengaluru - 560 064
Phone / Fax : 080 23626359, 23626493 e-Mail : mgiredblr@gmail.com / mgiredblr@hotmail.com / edmgired@gmail.com Website : www.mgired.karnataka.gov.in

## ಟೆಂಡರ್ ಅರ್ಜಿ

ವಾಹನದ ಹರಾಜಿಗಾಗಿ ದರಗಳನ್ನು ನೀಡಲು ನಮೂನೆ

(ದಿನಾಂಕ 29.11.2023 ರ ಬೆಳಗ್ಗೆ 10:00 ರಿಂದ ದಿನಾಂಕ 13.12.2023 ರ ಸಂಜೆ 04:00 ರವರೆಗೆ)

| | |
|---|---|
| ಮುಂಗಡ ಠೇವಣಿ ಮೊತ್ತದ ಹಣ | ರೂ.<br><br>ರೂಪಾಯಿ |
| ಡಿಮಾಂಡ್ ಡ್ರಾಫ್ಟ್ (ಡಿ.ಡಿ.) ವಿವರಗಳು | ಸಂಖ್ಯೆ: |
| | ದಿನಾಂಕ: |
| | ಬ್ಯಾಂಕ್: |
| | ಶಾಖೆ: |
| ಬಿಡ್‌ದಾರರ ಹೆಸರು | |
| ವಿಳಾಸ* | |
| ದೂರವಾಣಿ/ಮೊಬೈಲ್ ಸಂಖ್ಯೆ | |

* ವಿಳಾಸವು ಪೂರ್ಣವಾಗಿರಬೇಕು ಮತ್ತು ಪುರಾವೆಯೊಂದಿಗೆ ಬೆಂಬಲಿತವಾಗಿರಬೇಕು (ದೃಢೀಕರಿಸಿದ ಪಡಿತರ ಚೀಟಿ, ನೋಂದಣಿ ಪ್ರಮಾಣ ಪತ್ರ, ಮತದಾರರ ಗುರುತಿನ ಚೀಟಿ/ಪಾಸ್‌ಪೋರ್ಟ್ ಪ್ರತಿಗಳು). ನೀಡಿರುವ ವಿಳಾಸದಲ್ಲಿ ಸಂವಹನಗಳನ್ನು ಸ್ವೀಕರಿಸಲು ಬಿಡ್‌ದಾರರು ಯಾವಾಗಲೂ ಲಭ್ಯವಿರಬೇಕು.

ಎಂ.ಜಿ.ಐ.ಆರ್.ಇ.ಡಿ. ಯಿಂದ ಮಾರಟಕ್ಕೆ ನೀಡಿರುವ ಸ್ವರಾಜ್ ಮಜ್ದಾ ಬಸ್‌ಗಾಗಿ ನಾನು / ನಾವು ನನ್ನ / ನಮ್ಮ ಅತ್ಯಧಿಕ ಬೆಲೆ ಪಟ್ಟಿಯನ್ನು ಸಲ್ಲಿಸುತ್ತೇವೆ.

| ಕ್ರಮ ಸಂಖ್ಯೆ | ನೋಂದಣಿ ಸಂಖ್ಯೆ | ಮಾದರಿ | ತಯಾರಿಕೆ | ನೀಡಲಾದ ಮೊತ್ತ |
|---|---|---|---|---|
| 1) | ಕೆ ಎ - 50 - 2038 | 2007 | ಸ್ವರಾಜ್ ಮಜ್ದಾ | ರೂ.<br><br>ರೂಪಾಯಿ |

ಸಹಿ

ಹೆಸರು: ____________________

2. ನಾನು/ನಾವು ತಿಳಿಸಲಾದ ನಿಯಮಗಳು ಮತ್ತು ವಾಹನದ ಟೆಂಡರ್ ಷರತ್ತುಗಳನ್ನು ಬಹಳ ಎಚ್ಚರಿಕೆಯಿಂದ ಓದಿದ್ದೇವೆ, ನಿರ್ದಿಷ್ಟವಾಗಿ, ಶ್ರದ್ಧೆಯಿಂದ ಹಣದ ಠೇವಣಿಯನ್ನು ಇಡುವ ಬಗ್ಗೆ ಮತ್ತು ಬದ್ಧವಾಗಿರಲು ಒಪ್ಪುತ್ತೇನೆ/ಒಪ್ಪುತ್ತೇವೆ. ಟೆಂಡರ್ ಷರತ್ತಿನಲ್ಲಿ ತಿಳಿಸಿದಂತೆ ಉದ್ಭವಿಸುವ ಯಾವುದೇ ವಿವಾದದ ಕುರಿತು ಕಾರ್ಯನಿರ್ವಾಹಕ ನಿರ್ದೇಶಕರು, ಎಂಜಿಐಆರ್‌ಇಡಿ ರವರ ನಿರ್ಧಾರಕ್ಕೆ ನಾನು/ನಾವುಗಳು ಬದ್ಧವಾಗಿರುತ್ತೇವೆ.
3. ನಾನು/ನಾವುಗಳು ಮತ್ತು ಎಂಜಿಐಆರ್‌ಇಡಿ ನಡುವಿನ ಒಪ್ಪಂದ ನಾನು/ನಾವುಗಳು ಯಶಸ್ವಿ ಬಿಡ್ಡರ್ ಎಂದು ಆಯ್ಕೆಯಾದಲ್ಲಿ, ಟೆಂಡರ್ ವಿಚಾರಣ ಪತ್ರ ಸಂಖ್ಯೆ:ಎಂಜಿಐ/ವಿಇಹೆಚ್/ಎಸ್‌ಡಬ್ಲ್ಯೂಎಂ/15/2015-16 ದಿನಾಂಕ 28.11.2023 ರಲ್ಲಿ ನಿಗದಿಪಡಿಸಿದಂತೆ ಸಂಪೂರ್ಣ ಅಥವಾ ಭಾಗಶಃ ಎಲ್ಲಾ ಅಥವಾ ಯಾವುದೇ ನಿಯಮಗಳನ್ನು ಮತ್ತು ಷರತ್ತುಗಳನ್ನು ಅನುಸರಿಸಲು ವಿಫಲವಾದಲ್ಲಿ ಶ್ರದ್ಧೆಯಿಂದ ಮುಂಗಡ ಠೇವಣಿ ಮೊತ್ತದ ಹಣವನ್ನು ಮುಟ್ಟುಗೋಲು ಹಾಕಿಕೊಳ್ಳುವುದಕ್ಕೆ ನಾನು/ನಾವುಗಳು ಒಪ್ಪುತ್ತೇವೆ.

4. ನಾನು/ನಾವುಗಳು ಟೆಂಡರ್ನಲ್ಲಿ ಆಯ್ಕೆಯಾದ ಸಂದರ್ಭದಲ್ಲಿ ನಾನು/ನಾವುಗಳು ವಾಹನದ ಖರೀದಿಗೆ ವಾಹನದ ಟೆಂಡರ್ ಷರತ್ತಿನಲ್ಲಿ ಹೇಳಿರುವ "GST" ಅನ್ನು ಹೆಚ್ಚುವರಿಯಾಗಿ ಪಾವತಿಸಲು ನಾನು/ನಾವುಗಳು ಒಪ್ಪಿರುತ್ತೇವೆ.
5. ವಾಹನವನ್ನು ವಿಶ್ವಾಸಾರ್ಹ/ಕಾನೂನುಬದ್ಧ ಉದ್ದೇಶಗಳಿಗಾಗಿ ಮಾತ್ರ ಬಳಸಲಾಗುವುದು ಎಂದು ನಾನು/ನಾವು ಈ ಮೂಲಕ ಒಪ್ಪಿಕೊಳ್ಳುತ್ತೇವೆ.

ಸ್ಥಳ ______________ ಖರೀದಿದಾರರ ಸಹಿ ________________

ದಿನಾಂಕ _______________ ಹೆಸರು ಮತ್ತು ಪೂರ್ಣ ಅಂಚೆ ವಿಳಾಸ

ಹೆಸರು ______________

ಲಗತ್ತು:-

1. ಟೆಂಡರ್‌ದಾರರು ಸಹಿ ಮಾಡಿದ ನಿಯಮಗಳು ಮತ್ತು ಷರತ್ತುಗಳನ್ನು ಹೊಂದಿರುವ ಟೆಂಡರ್
2. ಡಿಮ್ಯಾಂಡ್ ಡ್ರಾಫ್ಟ್ (ಡಿ.ಡಿ.)